# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 07/15-16.**

**ದಿನಾಂಕ : 25-10- 2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಕೆ ಅವ್ವಮ್ಮ ಕೋಂ.ಯು ಕೆ ಹಸನಬ್ಬ,<br>ಕೇಳ್ತಾಜೆ ಮನೆ,<br>ಕನ್ಯಾಡಿ ಗ್ರಾಮ ಮತ್ತು ಸವಣಾಲು ಅಂಚೆ,<br>ಬೆಳ್ತಂಗಡಿ ತಾಲೂಕು ದ.ಕ<br>(ನ್ಯಾಯವಾದಿ ಶ್ರೀ ಕೆ ರಾಮಚಂದ್ರ ಗೌಡ ) | -ಮತ್ತು- | ತಹಶೀಲ್ದಾರರು,<br>ಬೆಳ್ತಂಗಡಿ ತಾಲೂಕು ದ.ಕ. |

ಪ್ರಸ್ತಾವನೆ

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರ ಮೇರೆಗೆ ಬೆಳ್ತಂಗಡಿ ತಾಲೂಕು ಕನ್ಯಾಡಿ ಗ್ರಾಮದ ಎನ್.ಸಿ.ಆರ್.ಸಿ.ಆರ್ 236/91-92 ರಂತೆ ತಹಶೀಲ್ದಾರರು ನೀಡಿದ ಹಿಂಬರಹ ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಕನ್ಯಾಡಿ ಗ್ರಾಮದ ಸ.ನಂ. 11/1ಪಿ ರ ಪೈಕಿ 3.50 ಎಕ್ರೆ ಅನಧಿಕೃತವಾಗಿ ಸ್ವಾಧೀನ ಇರುವ ಜಮೀನನ್ನು ಅಕ್ರಮಸಕ್ರಮದಂತೆ ಮಂಜೂರಾತಿಗಾಗಿ ಸಲ್ಲಿಸಿದ ನಮೂನೆ 50 ರ ಅರ್ಜಿಯು ಬೆಳ್ತಂಗಡಿ ತಾಲೂಕು ಕನ್ಯಾಡಿ ಗ್ರಾಮದ ಎನ್.ಸಿ.ಆರ್.ಸಿ.ಆರ್ 236/91-92 ರಂತೆ ದಾಖಲಾಗಿದ್ದು ಸದ್ರಿ ಸ್ವಾಧೀನ ಇರುವ ಜಮೀನಿನಲ್ಲಿ ತೆಂಗು, ಬಾಳೆ, ಗೇರು, ಕಸಿ ಮಾವಿನ ಗಿಡ, ರಬ್ಬರ್, ಅಗಳು, ಕೆರೆ, ವಾಸದ ಮನೆ ಹಾಗೂ ಇನ್ನಿತರ ಕೃಷಿ ಮಾಡಿಕೊಂಡು ಸುತ್ತ ಬೇಲಿ ನಿರ್ಮಿಸಿಕೊಂಡಿರುತ್ತಾರೆ. ಬೆಳ್ತಂಗಡಿ ತಹಶೀಲ್ದಾರರು ಈ ಅರ್ಜಿಯ ಬಗ್ಗೆ ತನಿಖೆ ನಡೆಸಿ ಕಮಿಟಿಯ ಮುಂದೆ ಮಂಡಿಸಿ ಪೂರ್ತಿ ಜಾಗಕ್ಕೆ ಸಾಗುವಳಿ ಚೀಟಿ ನೀಡದೆ ಕೇವಲ 1.99 ಎಕ್ರೆಗೆ ಮಾತ್ರ ಸಾಗುವಳಿ ಚೀಟಿ ನೀಡಿದ ಕಾರಣಕ್ಕಾಗಿ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 26-05-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಈ ದಿನ ವಿಚಾರಣೆ ಆರಂಭಿಸಿ ಯುಕ್ತ ಕಾಲವಕಾಶ ನೀಡಿ ದಿನಾಂಕ : 30-06-2015 ರಂದು ವಿಚಾರಣೆ ಕೈಗೆತ್ತಿಕೊಂಡು ಕಾಲ ಕಾಲಕ್ಕೆ ಮುಂದೂಡಿ ದಿನಾಂಕ 8-3-2016ರಂದು ಕೊನೆಯದಾಗಿ ವಿಚಾರಣೆಯನ್ನು ನಡೆಸಿ ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿಯ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿದಾರರು ಆಕ್ರಮಣ ಮಾಡಿ ಕೃಷಿಕೃತಾವಳಿ ಮಾಡಿರುವ ಪೂರ್ತಿ ಜಾಗವನ್ನು ಮಂಜೂರು ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ

ಪ್ರತಿವಾದಿಯ ಕಚೇರಿಯಿಂದ ನೀಡಲಾದ ದೃಢೀಕೃತ ದಾಖಲೆಗಳನ್ನು ಪರಿಶೀಲಿಸಲಾಗಿ ಕೃಷಿ ಜಮೀನು ಮೋಜಣಿಯಿಂದ ಗುರ್ತಿಸಿ ಸಮಿತಿ ಮುಂದೆ ಕಡತ ಮಂಡಿಸಿ 2000ನೇ ಇಸವಿಯಲ್ಲಿ ಮಂಜೂರು ಮಾಡಿ ಸಾಗುವಳಿ ಚೀಟಿ ನೀಡಲಾಗಿದೆ. ಇದರಿಂದ ಬಾಧಿತರಾದಲ್ಲಿ ಅಂದೇ ಮೇಲ್ಮನವಿ ಸಲ್ಲಿಸಲು ಅವಕಾಶವಿತ್ತು. ಸುಮಾರು 16 ವರ್ಷಗಳ ಬಳಿಕ ಮೇಲ್ಮನವಿ ಸಲ್ಲಿಸಿರುವುದು ನ್ಯಾಯಸಮ್ಮತವಲ್ಲ ಹಾಗೂ ಸರ್ಕಾರಿ ಜಮೀನು ಕಬಳಿಸಲು ನಡೆಸಿದ ಹುನ್ನಾರವೆಂದು ಕಂಡು ಬರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಮೇಲ್ಮನವಿದಾರರು ಅರ್ಜಿಯಲ್ಲಿ ಕಾಣಿಸಿದ ಹೆಚ್ಚುವರಿ ಜಮೀನು ಆಕ್ರಮಣವನ್ನು ಸರ್ಕಾರಕ್ಕೆ ಸ್ವಾಧೀನ ಪಡೆಯಲು ನಿಯಮಾನುಸಾರ ಮರು ತನಿಖೆ ನಡೆಸಿ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ.ರಾಜೇಂದ್ರ ಕೆ.ವಿ, ಐ.ಎ.ಎಸ್.

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಕೆ ರಾಮಚಂದ್ರ ಗೌಡ,I.B ರೋಡ್, ಬೆಳ್ತಂಗಡಿ ತಾಲೂಕು ದ.ಕ. - 574214 ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.